ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ**

ಸ್ವಚ್ಛ ಭಾರತ
ಒಂದು ಹೆಜ್ಜೆ ಸ್ವಚ್ಛತೆಯ ಕಡೆಗೆ

# ಹಸಿ ಕಸದಿಂದ ಜೈವಿಕ ಗೊಬ್ಬರ; ಕೊಪ್ಪಳ ಕಾಂಪ್ರೋಸ್ಟ್ ಯೋಜನೆಗೆ ಬೆಳವಿನಹಾಳ ಜನರ ಸಹಕಾರ

**ರಾಜ್ಯದ ಗಮನ ಸೆಳೆದ ಪೈಪ್ ಕಾಂಪ್ರೋಸ್ಟ್ ಯೋಜನೆ**

**ಕೊಪ್ಪಳ ಜಿಲ್ಲಾ ಪಂಚಾಯಿತಿಯಿಂದ ಯಶಸ್ವಿ ಅನುಷ್ಠಾನ**

**ಯೋಜನೆ ಜಾರಿಗೊಳಿಸಿದ ಕೊಪ್ಪಳದ ಮೊದಲ ಗ್ರಾಮ 'ಬೆಳವಿನಹಾಳ'**





'ಹಸಿ ಕಸ ಶಾಪವಲ್ಲ, ವರ' ಎನ್ನುತ್ತಿದ್ದಾರೆ ಕೊಪ್ಪಳ ಜಿಲ್ಲೆಯ ಕೊಪ್ಪಳ ತಾಲೂಕಿನ ಬೆಳವಿನಹಾಳ ಗ್ರಾಮದ ಜನರು. ಹಾಲವರ್ತಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಈ ಸಣ್ಣ ಗ್ರಾಮದಲ್ಲೀಗ ಹಸಿ ಕಸವನ್ನು ರಸವನ್ನಾಗಿಸುವ ಜೈವಿಕ ಗೊಬ್ಬರ ತಯಾರಿ ಪರ್ವ ಶುರುವಾಗಿದೆ. ಎಲ್ಲೆಂದರಲ್ಲಿ ಎಸೆದು ಪರಿಸರ ಮಾಲಿನ್ಯಕ್ಕೆ ಕಾರಣವಾಗುತ್ತಿದ್ದ ಹಸಿ ಕಸದಿಂದ ಜೈವಿಕ ಗೊಬ್ಬರವನ್ನಾಗಿಸುವ ಕಾರ್ಯಕ್ಕೆ ಕೊಪ್ಪಳ ಜಿಲ್ಲಾ ಪಂಚಾಯಿತಿ ಚಾಲನೆ ನೀಡಿದೆ. ಇದುವೇ ಪೈಪ್ ಕಾಂಪ್ರೋಸ್ಟ್ಯೋಜನೆ. **ಜಿಲ್ಲೆಯಲ್ಲಿ ಪ್ರಾಯೋಗಿಕವಾಗಿ ಜಾರಿಗೊಳಿಸಿದ ಯೋಜನೆ ಆರಂಭದಲ್ಲೇ ಯಶಸ್ಸು ಕಂಡಿದೆ.**

ಜಿಲ್ಲೆಯ 580 ಗ್ರಾಮಗಳ ಪೈಕಿ ಕೊಪ್ಪಳ ತಾಲೂಕಿನ ಹಾಲವರ್ತಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬೆಳವಿನಹಾಳ ಗ್ರಾಮದಲ್ಲಿ ಪೈಪ್ ಕಾಂಪೋಸ್ಟ್ ಯೋಜನೆಯನ್ನು ಸಮರ್ಪಕವಾಗಿ ಹಾಗೂ ಪೂರ್ಣ ಪ್ರಮಾಣದಲ್ಲಿ ಅನುಷ್ಠಾನಗೊಳಿಸಲಾಗಿದೆ. ಆ ಮೂಲಕ ಪೈಪ್ ಕಾಂಪೋಸ್ಟ್ ಅಳವಡಿಸಿಕೊಂಡ ಜಿಲ್ಲೆಯ ಮೊದಲ ಗ್ರಾಮ ಎಂಬ ಹೆಗ್ಗಳಿಕೆಗೆ ಬೆಳವಿನಹಾಳ ಪಾತ್ರವಾಗಿದೆ. **ಗ್ರಾಮದಲ್ಲಿ ಒಟ್ಟು 98 ಕುಟುಂಬಗಳಿದ್ದು , ಕಾಂಪೋಸ್ಟ್ ಅಳವಡಿಸುವ ಯೋಜನೆಗೆ ಗ್ರಾಮಸ್ಥರು ಪೂರ್ಣ ಪ್ರಮಾಣದಲ್ಲಿ ಸಹಕರಿಸಿದ್ದಾರೆ.** ಇದರಿಂದಾಗಿ ಯೋಜನೆಯನ್ನು ಜಿಲ್ಲಾದ್ಯಂತ ವಿಸ್ತರಿಸುವ ಜಿಲ್ಲಾ ಪಂಚಾಯಿತಿಯ ಇರಾದೆಗೆ ಆನೆ ಬಲ ಬಂದಾಂತಾಗಿದೆ.



## ಅಳವಡಿಕೆ ಸುಲಭ

ಪಿವಿಸಿ ಪೈಪ್ ಅಥವಾ ಸಿಮೆಂಟ್ ಪೈಪ್ ಬಳಸಿ ದಿನನಿತ್ಯ ಉತ್ಪತ್ತಿಯಾಗುವ ಅಡುಗೆ ಮನೆಯ ಹಸಿ ಕಸವನ್ನು ಜೈವಿಕ ಗೊಬ್ಬರವನ್ನಾಗಿ ಮಾರ್ಪಡಿಸುವುದೇ ಪೈಪ್ ಕಾಂಪೋಸ್ಟ್ ಯೋಜನೆ. 6 ಅಡಿ ಉದ್ದದ ಪೈಪ್‌ಅನ್ನು ಭೂಮಿಯಲ್ಲಿ ಹೂತು ನಿಲ್ಲಿಸಲಾಗುತ್ತದೆ. ಅದಕ್ಕೆ ಒಣ ಎಲೆಗಳು, ಸಗಣಿ ನೀರು, ಬೆಲ್ಲ ಮತ್ತು ಸ್ವಲ್ಪ ಮಣ್ಣನ್ನು ಸೇರಿಸಿದ ನಂತರ; ಪ್ರತಿನಿತ್ಯ  ಅಡುಗೆ ಮನೆಯಲ್ಲಿ ಉತ್ಪತ್ತಿಯಾಗುವ  ಹಸಿ ಕಸವನ್ನು ಪೈಪ್‌ಗೆ ಹಾಕುತ್ತಾ ಬರಲಾಗುತ್ತದೆ. ಪೈಪ್ ಅನ್ನು ನಿಯಮಿತವಾಗಿ ತೇವಗೊಳಿಸಬೇಕು. ಕೆಲವು ವಾರಗಳಲ್ಲಿ ಅದು ಗೊಬ್ಬರವಾಗಿ ಪರಿವರ್ತನೆಯಾಗುತ್ತದೆ. ಅಡುಗೆ ಮನೆಯ ತ್ಯಾಜ್ಯವನ್ನು ಗೊಬ್ಬರವಾಗಿ ಪರಿವರ್ತಿಸುವ ಸರಳ ಹಾಗೂ ಪರಿಸರ ಸ್ನೇಹಿ ವಿಧಾನ ಇದಾಗಿದೆ.

## ಹಸಿ ಕಸ ಮುಕ್ತ ಸ್ವಚ್ಛ ಗ್ರಾಮ ಪರಿಕಲ್ಪನೆಗೆ ಮುನ್ನುಡಿ

ಜಿಲ್ಲಾ ಪಂಚಾಯಿತಿಯ ಅನಿರ್ಬಂಧಿತ **3 ಲಕ್ಷ ರೂ.** ಅನುದಾನದಲ್ಲಿ ಬೆಳವಿನಹಾಳ ಗ್ರಾಮದ ಪ್ರತಿ ಮನೆ, ಶಾಲೆ ಹಾಗೂ ಅಂಗನವಾಡಿ ಕೇಂದ್ರಗಳಲ್ಲಿ ಎರಡು ಪೈಪ್ ಅಳವಡಿಸುವ ಮೂಲಕ ಹಸಿ ಕಸ ಮುಕ್ತ ಸ್ವಚ್ಛ ಗ್ರಾಮ ಪರಿಕಲ್ಪನೆಗೆ ಮುನ್ನುಡಿ ಬರೆಯಲಾಗಿದೆ.

## ಖರ್ಚು ಕಡಿಮೆ, ಲಾಭ ಹೆಚ್ಚು

ಈ ಪೈಪ್ ಕಾಂಪೋಸ್ಟ್ ಅಳವಡಿಕೆಯಿಂದ ಹಲವು ಪ್ರಯೋಜನಗಳಿವೆ. ಮನೆಯಲ್ಲಿ ನಿತ್ಯ  ಉತ್ಪತ್ತಿಯಾಗುವ ಹಸಿ ತ್ಯಾಜ್ಯ ವಿಲೇವಾರಿಗಾಗಿ ಕಸದ ವಾಹನಕ್ಕಾಗಿ ಕಾದು ಕೂರಬೇಕಿಲ್ಲ. ಮನೆಯಲ್ಲಿಯೇ ಸುಲಭವಾಗಿ ನಿರ್ವಹಣೆ ಮಾಡಬಹುದು. ಕಸ ಉತ್ಪತ್ತಿಯಾದ ತಕ್ಷಣ ಈ ಕಾಂಪೋಸ್ಟ್ ಪೈಪ್‌ನಲ್ಲಿ ಹಾಕಬಹುದು. ಪೈಪ್ ಕಾಂಪೋಸ್ಟ್ ಅಳವಡಿಕೆಗೆ ಖರ್ಚೂ ಕಡಿಮೆ, ಹೆಚ್ಚು ಜಾಗವೂ ಬೇಕಿಲ್ಲ.

ಪೈಪ್ ಕಾಂಪೋಸ್ಟ್ ಪರಿಸರಕ್ಕೆ ಹಾನಿಯಾಗದಂತೆ ಕೊಳೆಯುವ ತ್ಯಾಜ್ಯವನ್ನು ಗೊಬ್ಬರವನ್ನಾಗಿ ಪರಿವರ್ತಿಸುತ್ತದೆ. ಇದಕ್ಕೆ ಹೆಚ್ಚು ಸ್ಥಳಾವಕಾಶದ ಅಗತ್ಯವಿಲ್ಲ. ಅಳವಡಿಸುವುದು ಸುಲಭ ಮತ್ತು ನಿರ್ವಹಣೆಯೂ ಸರಳ.

ಸದ್ಯ ಬೆಳವಿನಹಾಳ ಗ್ರಾಮದ ಗ್ರಾಮಸ್ಥರು ಕಾಂಪೋಸ್ಟ್ ಅಳವಡಿಕೆಗೆ ಅಪಾರ ಆಸಕ್ತಿ ತೋರಿಸುತ್ತಿದ್ದಾರೆ. ಗ್ರಾಮದಲ್ಲಿ ತಮ್ಮದೇ ಆದ ಒಂದು ತಂಡವನ್ನು ರಚಿಸಿ, ಪ್ರತಿ ಮನೆಗೆ ಭೇಟಿ ನೀಡುವ ಮೂಲಕ ಪೈಪ್ ಕಾಂಪೋಸ್ಟ್ ಮಹತ್ವ ಹಾಗೂ ನಿರ್ವಹಣೆಯ ಕುರಿತು ಜಾಗೃತಿ ಮೂಡಿಸುತ್ತಿದ್ದಾರೆ. ಮುಂದಿನ ದಿನಗಳಲ್ಲಿ ಗ್ರಾಮದ ಹೊರಗೆ ಹಾಗೂ ಜಿಲ್ಲಾದ್ಯಂತ ಪೈಪ್ ಕಾಂಪೋಸ್ಟ್ ಅಳವಡಿಕೆಗೆ ಸಿದ್ಧತೆ ನಡೆಯುತ್ತಿದೆ. ಕಸದಿಂದ ರಸ ಮಾಡುವ ಮೂಲಕ ಸ್ವಚ್ಛ ಗ್ರಾಮ-ಸ್ವಚ್ಛ ಭಾರತ ನಿರ್ಮಾಣ ಸಾಕಾರವಾಗಲಿ ಎಂಬುದೇ ನಮ್ಮ ಆಶಯ.